ತನ್ನ ಸ್ಥಿತಿಗೆ ತಾನೆ ಮರುಗುವಂತಾಯಿತು.

'ಆಂ... ಅಹಹಾ... ಏನ್ ಏನಂದೆ ಗಂಡ್ಸೆ, ಏಲಕ್ ಕುಂತ್ರೆ ಎದ್ದೋಳ್ಳಾಗ್ದೆ ತಟ್ಟಾಡೋನು ಅದೆಂಗ್ ಎದ್ದೋಳ್ತಿ ಏಳ್ ನೋಡೆ ಬಿಡ್ತೀನ್ ನಿನ್ನಾಸನ' ಎಂದ ಗಾಬಮ್ಮ ಮಾರುತ್ತರವಾದಳು.

ಬದುಕಿರುವಾಗಲೇ ಸಾಯ ಶಬ್ದ ಕೇಳಿಸಿಕೊಂಡರೂ ಕೇಳಿಸದವನಂತೆ ಉಲುಪಯ್ಯ, ಹುರಿ ಬಾಡಿನ ತಟ್ಟೆ ಹತ್ತಿರ ಎಳೆದು ನಡುಗುವ ಕೈಯಿಂದ ತುಂಡ ಬಾಯಿಗಿರಿಸಿದ. ಇರುವ ಒಡ್ಡಿ ಮೂಗಾಳು ಹಲ್ಲುಗಳ ಸಹಕಾರದಿಂದ ಅತ್ತಿತ್ತ ಹೊರಳಿಸಿದ. ಅರೆ ನುರಿತ ಬಾಡ ಇದ್ದಂತೆ ಒಳಕ್ಕೆ ಕಳಿಸುತ್ತ ಅನುಭವದ ಮಾತು ಮುಂದುವರಿಸಿದ.

ಹಿರಿ ತಲೆಗಳು ಆಗಿನ್ನೂ ದನ ಕಾಯೊ ವಯಸ್ಸಿನ ಹುಡುಗರು. ವರ್ಷೊಂಬತ್ತು ಕಾಲ ಹರಿಯುತ್ತಿದ್ದ ಮಾರಿಹಳ್ಳದಲ್ಲಿ ನೀರು ಕುಡಿದ ದನ ದಣಿವಾರಿಸಿಕೊಂಡರೆ, ಹೊಂಡ ಬಿದ್ದ ಹಳ್ಳದ ನೀರಲ್ಲಿ ಮೀನಿಡಿವ ಆಟವಾಡುತ್ತಿದ್ದರು. ಅವರು ಮದುವೆಯಾಗಿ ಮಕ್ಕಳಾಗುವ ಹೊತ್ತಿಗೆ ಮಾರಿಹಳ್ಳಕ್ಕೆ ಅಡ್ಡಲಾಗಿ ಕೆರೆ ಕಟ್ಟಲಾಯಿತು. ಅದರ ಸುತ್ತಲಿದ್ದ ಕಾಡು ಕಡಿದು ಭೂಮಮ್ಮನ ತಲೆ ಬೋಳಿಸಿ ಬಟಾ ಬಯಲಾಯಿತು. ಆಕಾಶದೆತ್ತರ ಬೆಳೆದು ನಿಂತಿದ್ದ ಹಿರಿ ಮರ ಕಿರಿ ಮರಗಳ ಬುಡ ಸವರಿ ಬೆತ್ತಲಾಯಿತು. ಕೊಂಬೆ ರೆಂಬೆಗಳಲ್ಲಿ ಗೂಡು ಕಟ್ಟಿ ಆಶ್ರಯ ಪಡೆದಿದ್ದ ಹಕ್ಕಿ ಪಕ್ಷಿಗಳು ನೆಲೆ ಇಲ್ಲದಾಗಿ ಆಕಾಶಕ್ಕೆ ಹಾರಿ ಬಿಸಿಲ ಬೇಗೆಯಲ್ಲಿ ರೆಕ್ಕೆ ಪುಕ್ಕ ಸುಟ್ಟುಕೊಂಡವು. ಆಕಾಶ ಇನ್ನೇನು ಮೂರೇ ಗೇಣಿರುವಷ್ಟು ಎತ್ತರ ಬೆಳೆದಿದ್ದ ಜೀರಿಗೆ ಮಾವಿನ ಮರ ಧರೆಗುರುಳುವಾಗ, ಊರ ಹೆಂಗಸರೆಲ್ಲ ಒಟ್ಟುಗೂಡಿ 'ಅಯ್ಯೋ' ಎಂದಂತಾಗಿ ತಲೆಯೊಪ್ಪಿಸಿತು. ಜೀರಿಗೆ ಮಾವಿನ ಮರದ ಗೋಳಿನ ಶಾಪವೆಂಬಂತೆ ಕಟ್ಟಿದಂತೆ ಕೆರೆ ಏರಿ ಇಬ್ಭಾಗವಾಗಿ ಕಟ್ಟುವ ಕಾಯಕರಿಗೆ ಸವಾಲಾಯಿತು. ಕೆರೆ ಏರಿ ಕಟ್ಟಿದಷ್ಟೂ ಒಡೆದು ಹೋಳಾಗಲು ಊರಮ್ಮನ ಮುನಿಸೆಂದು ಜನ ಕೈ ಮುಗಿದು ಅವಳ ಹೆಸರಲ್ಲಿ ಜಾತ್ರೆ ಸಾಗಿಸಿದರು. ಅಪರೂಪದ ಜಾತ್ರೆಯೆಂದು ಲೆಕ್ಕವಿಲ್ಲದಷ್ಟು ಕುರಿ ಕೋಣಗಳ ಬಲಿ ಕೊಟ್ಟರು. ಏರಿ ಹರಿವ ಜಾಗಕ್ಕೆ ಗಾರೆ ಅರೆದು ಕಲ್ಲಿಂದ ಕಟ್ಟಿಸಿದರು. ಬಲಿ ಪಡೆದ ಊರಮ್ಮ ಶಾಂತವಾದಳೆಂದು, ಕಲ್ಲಿನ ಗೋಡೆ ಮುಂದೆ ಊರಮ್ಮನ ಗುಡಿ ಕಟ್ಟಿಸಿದರು. ಕಟ್ಟಿದ ಗುಡಿಯಲ್ಲಿ ಊರಮ್ಮನ ಕೂರಿಸಿ ಕಣಿವೆಮ್ಮ ಎಂದು ಹೆಸರಿಟ್ಟರು. ಜಾತ್ರೆ ಮುಗಿದ ಮೂರು ದಿನಕ್ಕೆ ಮಾಯದಂತ ಮಳೆ ಬಂದು ಕಟ್ಟಿದ ಕೆರೆ ತುಂಬಿ ಬಯಲೆಲ್ಲ ಹಸಿರಾಯಿತು. ಕೆರೆ ತುಂಬಲು ಕಣಿವೆಮ್ಮನ ಮೈಮೆಯೆಂದು ಊರ ಜನ ಮರಿ ಜಾತ್ರೆ ಮಾಡಿ, ಅಸೆದವನ ಕರೆಸಿ ಅವಳ ಹಾಡಿ ಹೊಗಳಿಸಿದರು. ಅದರ ಹಿಂದಿಂದೆ ಬರಗಾಲ ಸಾಲಾಗಿ ಬಂದು ಕೆರೆ ತುಂಬುವುದಿರಲಿ; ವರ್ಷೊಂಬತ್ತು ಕಾಲ ಹರಿಯುತ್ತಿದ್ದ ಮಾರಿಹಳ್ಳ ಬರಿದಾಗಿ ಬೆಂಗಾಡಾಯಿತು. ಊರ ಜನ ಮುಗಿಲು ನಂಬಿದರೆ ಬದುಕು ಸಾಗದೆಂದು ಭೂಮಮ್ಮನ ಒಡಲು ಬಗೆದು ನೀರು ತೆಗೆವ ಸಾಹಸಕ್ಕಿಳಿದರು. ಮೂರಾಳು ಆಳದ ಬಾವಿ ತೋಡಿ ಜಲರಾಶಿ ಉಕ್ಕಿ ಹರಿಯಿತು. ಕಪಿಲೆ ಬಾನಿಯಿಂದ ಗಂಗಮ್ಮನ ಎತ್ತಿ ಹೊಲಕ್ಕೆ ಹರಿಸಿ ಕಬ್ಬು ಕಡ್ಡಿ ಬೆಳೆದರು. ಹಿರಿತಲೆಗಳ ಕಣ್ಣ ಮುಂದೆಯೇ ತೋಡಿದ ಬಾವಿ ಜಲಬತ್ತಿ ಕಾಣೆಯಾಯಿತು. ಮತ್ತೆ ಗಂಗಮ್ಮನ ಮುಖ ಕಾಣಲು ಮೂರಾಳಿಗೆ ಬದಲು ಆರಾಳು ಆಳದ ಬಾವಿ ತೋಡಬೇಕಾಯಿತು. ಕಪಿಲೆ ಬಾನಿ ಹೊಲೆವ ನೈಪುಣ್ಯಕ್ಕೆ ಬೆಲೆ ಇಲ್ಲದಾಗಿ ಮಣೆಗಾರರು ಊರು ಬಿಟ್ಟರು. ಬಿಟ್ಟಿ ಚಾಕರಿ ತುತ್ತಿನ ಚೀಲ ತುಂಬಿಸದೆಂಬ ಸತ್ಯವರಿತು ಹಟ್ಟಿಗೆ ಹಟ್ಟಿಯೇ ಕೆಟ್ಟು ಪಟ್ಟಣ ಸೇರಿ ಮಲ ಹೊರುವ ಕಾಯಕ ಮಾಡಿತು. ಗೌಡರ ಮನೆಯ ಅಟ್ಟದಲ್ಲಿ ಕಪಿಲೆ ಬಾನಿ ಕಬ್ಬಿಣದ ಬಳೆ ತುಕ್ಕಿಡಿದು ಕಣ್ಣೀರು ಸುರಿಸಿತು. ಬಂಧು ಬಳಗವಿಲ್ಲದ ತೌರಿಗೆ ಬರನೆಂದು ಗಂಗಮ್ಮ ಗೌಡರ ಆರಾಳು ಆಳದ ಬಾವಿಯಲ್ಲಿ ಮಂಚಕ್ಕೆ ಮುಖ ಮಾಡಿ ಮಲಗಿದಳು. ಹಟ ಹಿಡಿದ ಗೌಡರು ಭಗೀರಥ ಪ್ರಯತ್ನ ಮಾಡಿದರು. ಕಮಲಪುರಕ್ಕೆ ಬಂದು ನಿಂತಿದ್ದ ಕರೆಂಟ್ ಕಂಬಗಳ ಚನ್ನಂಗಿದುರ್ಗಕ್ಕೂ ಎಳೆತಂದರು. ಗೊಲ್ಲೇರಿ ಒಳಗೊಂಡು ಸುತ್ತಲ ಹಳ್ಳಿಗೆ ತಂತಿ ಹರಡಿದರು. ಕಾರ್ಯಕ್ರಮವನ್ನು ಟುಮಕಿಪುರದ ಪುಣ್ಯಾತ್ಮರು ಬಂದು ಉದ್ಘಾಟನೆ ಮಾಡಿದರು. ಬಾವಿಯಿಂದ ನೀರೆತ್ತಲೂ ಬೀದಿಗೆ ಬೆಳಕು ತಾರಲು ಕಾರಣರಾದ ಗೌಡರು ಚನ್ನಂಗಿದುರ್ಗ ಸುತ್ತಲ ಗ್ರಾಮಗಳಲ್ಲಿ ಭಗೀರಥರೆಂದು ಹೆಸರುವಾಸಿಯಾದರು.

●